**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.143/2018**

**CW -1 PW-1**

ಪ್ರಮಾಣೀಕರಿಸಿದ ದಿನಾಂಕಃ **19-02-2026**

---

**ಮುಂದುವರೆದ ಮುಖ್ಯ ವಿಚಾರಣೆ:-** ಮಾನ್ಯ ಸಸಅ ರವರಿಂದ **.**

ನ್ಯಾಯಾಲಯದ ಮುಂದೇ ಇರುವ ಪ್ಲಾಸ್ಟಿಕ್ ಬಕೇಟನ್ನು ಮು.ಮಾ-1 ಎಂದು ಗುರುತಿಸಲಾಯಿತು.

ಪಾಟೀ ಸವಾಲು**:- 3** ನೇ ಆರೋಪಿ ಪರ ಬಿ.ಹೆಚ್ ವಕೀಲರಿಂದ

ಘಟನೆ ಆದ ದಿನಾಂಕ ತಿಂಗಳು, ವರ್ಷ ಹೇಳಲು ಬರುವುದಿಲ್ಲ. ಸದರಿ ಬಕೇಟು ಆರೋಪಿ ಮನೆಯ ಹತ್ತಿರ ಇತ್ತು. ಬಕೇಟನಿಂದ ಹೊಡೆದಿದ್ದರಿಂದ ಬಕೇಟ್ ಮುರಿದಿರುವುದಿಲ್ಲ. ಬಕೇಟ್ ಯಾವ ಕಂಪನಿದೆಂದು ಹೇಳಲು ಬರುವುದಿಲ್ಲ. ಸದರಿ ದಿನ ಬಕೇಟಗೆ ರಕ್ತ ಹತ್ತಿತ್ತು. ಸದರಿ ರಕ್ತ ಗಾಯದಿಂದ ರಕ್ತ ನನ್ನ ಮಗಳ ಬಟ್ಟೆಗೆ ರಕ್ತ ಹತ್ತಿತ್ತು. ಸದರಿ ರಕ್ತದ ಬಟ್ಟೆಯನ್ನು ಪೊಲೀಸರಿಗೆ ನೀಡಿರುತ್ತೇನೆ. ಯಲ್ಲಮ್ಮ ಬಕೇಟನಿಂದ ನನ್ನ ಮಗಳಿಗೆ ಹೋಡೆದು ರಕ್ತ ಗಾಯ ಮಾಡಿರುತ್ತಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಗಂಡನ ತಲೆ ಸರಿ ಇಲ್ಲದೇ ಇರುವುದರಿಂದ ಮನೆ ಬಿಟ್ಟು ಹೋಗಿರುತ್ತಾನೆ. ಈಗ ಕಳೆದ 6 ವರ್ಷಗಳ ಹಿಂದೆ ನನ್ನ ಗಂಡ ಮನೆ ಬಿಟ್ಟು ಹೋಗಿರುತ್ತಾನೆ. ಸದರಿ ಈ ಘಟನೆ ಆದ ನಂತರ ನನ್ನ ಗಂಡ ಮನೆ ಬಿಟ್ಟು ಹೊಗಿರುತ್ತಾನೆ. 1 ನೇ ಆರೋಪಿ ಮನೆ ಬಿಟ್ಟು ಹೋದ ಬಗ್ಗ ಪೊಲೀಸರಿಗೆ ದೂರು ನೀಡಿರುತ್ತೇನೆ. ಪೊಲೀಸ್ ಠಾಣೆಗೆ ದೂರನ್ನು ಈರಣಗೌಡ ದಾಖಲಿಸಿರುತ್ತಾರೆ. ದೂರಿನಲ್ಲಿ ಬರೆದ ಸಂಗತಿಗಳು ನನಗೆ ಗೊತ್ತು. ಸದರಿ ಈರಣಗೌಡ ನೀಡಿದ ದೂರಿಗೆ ನಾನು ಸಹಿ ಮಾಡಿರುವುದಿಲ್ಲ. ಮು.ಮಾ-1 ಎಲ್ಲಾ ಕಡೆ ದೊರೆಯುತ್ತವೆ ಅಂದರೆ ಸರಿ.

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಅಂದರೆ ಸರಿಯಲ್ಲ. ಯಾವುದೇ ಘಟನೆ ಆಗದೇ ಇದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ದೇವದುರ್ಗ.
ದೇವದುರ್ಗ.